ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಷ್ಟೇ ಹೇಳುತ್ತೇನೆ, ಹಣಕಾಸಿನ ಸಚಿವರು ಇಲ್ಲೇ ಇರುವ ಈ ಸಮಯದಲ್ಲಿ ಅವರು ಒಂದು ಕ್ಷಣವೂ ತಡಮಾಡದೆ, ರೈತರಿಗೆ ಅನುಕೂಲಕರವಾದ ಉತ್ತರವನ್ನು ಕೊಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆಗಸ್ಟ್ 15ರೊಳಗಾಗಿ ಈ ರಾಜ್ಯದ ರೈತರಿಗೆ ಬೆಳೆ ವಿಮೆ ಬಾಕಿಯನ್ನು, ಅದನ್ನು ಕೊಡಲು ತಾವು ಏನು ಸರ್ವೆ ಮಾಡುತ್ತೀರೋ, ಏನು ದಾಖಲೆ ಪರಿಶೀಲನೆ ಮಾಡುತ್ತೀರೋ, ಇದೆಲ್ಲವನ್ನೂ ಪೂರ್ಣ ಮಾಡಿ, ಆಗಸ್ಟ್ 15ರೊಳಗಾಗಿ ಬೆಳೆ ವಿಮೆಯ ಹಣವನ್ನು ಸಂಪೂರ್ಣ ಪಾವತಿ ಮಾಡಬೇಕು. ಮಾನ್ಯ ಸಿದ್ಧರಾಮಯ್ಯನವರೇ, ಆಗಸ್ಟ್ 15ರೊಳಗೆ ನೀವು ಅದನ್ನು ಮಾಡಲಿಲ್ಲವೆಂದರೆ, ಈ ಭಾಗದಲ್ಲಿರುವಂಥ ಎಲ್ಲಾ ಶಾಸಕರು, ನಾನು ನಮ್ಮ ಸ್ನೇಹಿತರಾದ ಜಿದ್ದಿಯವರನ್ನು ಕರೆದುಕೊಂಡು ಬಂದು ವಿಧಾನಸೌಧದ ಮುಂದೆ ಧರಣಿ ಸತ್ಯಾಗ್ರಹ ಮಾಡುವುದು ಅನಿವಾರ್ಯವಾಗುತ್ತದೆ. ನಾಳೆ ಅಧಿವೇಶನ ಮುಗಿದ ಮೇಲೆ ನಾವು ಜನಗಳಿಗೆ ಮುಖ ತೋರಿಸಲು ಆಗುವುದಿಲ. ರೈತರಿಗೆ ಭರವಸೆ ಕೊಟ್ಟು ಬಂದ ನೀವು, ಬೆಳೆ ನಾಶವಾದಂಥಾದ್ದಕ್ಕೆ ಪರಿಹಾರ ಕೊಡಲು, ಬೆಳೆ ವಿಮೆ ಹಣವನ್ನು ಕೊಡಲು ನೀವು ತಾರತಮ್ಯ ಮಾಡಿಕೊಂಡು, ನೋಡುತ್ತೇವೆ, ಸೆಪ್ಟೆಂಬರ್‌ವರೆಗೆ ಟೈಂ ಬೇಕು, ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಹೇಳುತ್ತೇವೆ ಎನ್ನುವ ನಿಮ್ಮ ಈ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ಬೆಳೆ ವಿಮೆ ಹಣವನ್ನು ನೀವು ಆಗಸ್ಟ್ 15ರೊಳಗಾಗಿ ಸಂದಾಯ ಮಾಡಬೇಕು, ಇಲ್ಲದಿದ್ದರೆ, ಆ ತಾರೀಖಿನಿಂದ ನಾವೆಲ್ಲಾ ಶಾಸಕರು ಅನಿರ್ದಿಷ್ಟ ಕಾಲದವರೆಗೆ ಇಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ ಎಂದು ಹೇಳಿ, ನಿಮ್ಮ ನೀತಿಯನ್ನು ವಿರೋಧ ಮಾಡಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಆಯಿತು, ನೀವು ಹೋಗಿ ಬನ್ನಿ, ಆದರೆ ಗಲಾಟೆ ಮಾಡಬೇಡಿ.

ಗೊಂದಲ

ಕೆ.ಜಿ.ಎಫ್‌ನ ಗೋಲ್ಡನ್ ವ್ಯಾಲಿ ಟ್ರಸ್ಟ್‌ರವರು ನಡೆಸುವ ಕಾಲೇಜಿಗೆ ಆಡಳಿತಾಧಿಕಾರಿಯನ್ನು ನೇಮಿಸುವುದು

105(819) ಶ್ರೀ ರಾಜೇಂದ್ರನ್ ಎಸ್.(ಕೆ.ಜಿ.ಎಫ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೆ.ಜಿ.ಎಫ್. ಗೋಲ್ಡನ್ ವ್ಯಾಲಿ ಇಜುಕೇಷನ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಕೆ.ಜಿ.ಎಫ್. ಪ್ರಥಮ ದರ್ಜೆ ಕಾಲೇಜು (ಅನುದಾನಿತ) ಇಲ್ಲಿ ಇರುವ ಈ ಕೆಳಕಂಡ ಅವ್ಯವಸ್ಥೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

1) ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ವಸೂಲಿ ಮಾಡಿರುವ ಬಗ್ಗೆ
2) ದುರಾಡಳಿತ ಹಾಗೂ ಎಸ್.ಸಿ./ಎಸ್.ಟಿ ವಿದ್ಯಾರ್ಥಿ ವೇತನದ ದುರ್ಬಳಕೆ ಬಗ್ಗೆ
3) ಟ್ರಸ್ಟೀಗಳ ಮಧ್ಯೆ ನಡೆಯುತ್ತಿರುವ ಒಳಜಗಳಗಳ ಬಗ್ಗೆ
4) ತರಗತಿಗಳನ್ನು ಸರಿಯಾಗಿ ನಡೆಸದಿರುವ ಬಗ್ಗೆ
5) ಕಾಲೇಜಿನಲ್ಲಿ ಸಮಾಜ ವಿರೋಧಿ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ
6) ಟ್ರಸ್ಟ್‌ನಿಂದ ಹಣದ ದುರ್ಬಳಕೆ ಬಗ್ಗೆ

ಬಿ) ಸದರಿ ಕಾಲೇಜಿಗೆ ಆಡಳಿತ ಅಧಿಕಾರಿಯನ್ನು ನೇಮಿಸುವ ಬಗ್ಗೆ